


ಅಯೋಧ್ಯೆಯ ಬಾಬರಿ ಮಸೀದಿ ಕೆಡವಲಾಗಿತ್ತು. ನಾಲ್ಕೂ ದಿಕ್ಕುಗಳಿಂದ ಬೇರೆಬೇರೆ ನಗರಗಳಲ್ಲಿ ಗಲಾಟೆ ದೊಂಬಿ ನಡೆದ ಸುದ್ದಿ ಬರುತ್ತಿತ್ತು. ದೆಹಲಿಯಲ್ಲಂತೂ ಬಹಳ ಗಲಾಟೆ. ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ಯಾವ ಸಮಯದಲ್ಲಾದರೂ ಹಿಂದೂ ಮುಸ್ಲಿಂ ಗಲಾಟೆ ಶುರುವಾಗಬಹುದಿತ್ತು.

ಸರಿಯಾಗಿ ಅದೇ ಸಮಯಕ್ಕೆ ಫಾರೂಖ್ ಬಾಂಬೆಗೆ ಹೋಗಬೇಕಾಯಿತು. ಮನೆಯಲ್ಲಿ ಫರ್ಝಾನಾ ಒಬ್ಬಳೆ. ಜೊತೆಯಲ್ಲಿ ನಾಲ್ಕು ವರ್ಷದ ಮಗಳು ಫರೀನ್ ಮತ್ತು ಮನೆಯ ಕೆಲಸಕ್ಕಿರುವ ಮಧ್ಯವಯಸ್ಸಿನ ರಹೀಂನ ತಾಯಿ.

ಫಾರೂಖ್ ಆಫೀಸಿಗೆ ಹೋಗುವಾಗ ಮಗಳನ್ನು ಮನೆಯ ಹತ್ತಿರವೇ ಇದ್ದ ಶಾಲೆಗೆ ಬಿಟ್ಟು ಹೋಗುತ್ತಿದ್ದ. ಅವನಿಲ್ಲದಿದ್ದರೆ ಆ ಜವಾಬ್ದಾರಿ ರಹೀಂನ ತಾಯಿಯದು. ಫಾರೂಖ್ ಮನೆಯಲ್ಲಿಲ್ಲದಿದ್ದರೆ ಫರ್ಝಾನಾಗೆ ಒಂಥರಾ ಭಯ.

ಫಾರೂಖ್ ಹೋದ ಮಾರನೆ ದಿನ ಬೆಳಿಗ್ಗೆ ದಿನಪತ್ರಿಕೆ ತಿರುವಿ ಹಾಕುತ್ತ ಕುಳಿತಿದ್ದಳು ಫರ್ಝಾನಾ. ನಿದ್ದೆಯಿಂದೆದ್ದ ಫರೀನ್ ಜೇನುನಗೆ ಸೂಸುತ್ತಾ ಹೊರಬಂದಳು. ಹಾಲಿನಂಥ ಬಿಳುಪಿನ ಮೈ, ಕಡುಕಪ್ಪು ತಲೆಗೂದಲಿನ ಮುದ್ದುಮುಖ. ಕಣ್ಣುಜ್ಜುತ್ತಲೇ ಕೇಳಿದಳು, “ಅಮ್ಮಾ, ಇವತ್ತು ಸಂಜೆ ಪ್ರೀತಿ ಹುಟ್ಟಿದ ಹಬ್ಬಕ್ಕೆ ಹೋಗ್ತಾ ಇದ್ದೀವಿ ಅಲ್ವಾ?”

ಫರ್ಝಾನಾಗೆ ಮರೆತೇಹೋಗಿತ್ತು. ಫರೀನ್‌ನ ಕ್ಲಾಸ್‌ಮೇಟ್‌ನ ತಂದೆ ದಾಶಗುಪ್ತೊ ಒಂದೆರಡು ದಿನಗಳ ಹಿಂದೆನೇ ಫೋನ್ ಮಾಡಿ ಮಗಳ ಹುಟ್ಟಿದ ಹಬ್ಬಕ್ಕೆ ಆಹ್ವಾನಿಸಿದ್ದರು. ಜೊತೆಗೆ, ಫರೀನ್ ಮೂಲಕ ಕಾರ್ಡ್ ಕೂಡ ಕಳುಹಿಸಿದ್ದರು. ಈ ಹುಡುಗಿಯರಿಬ್ಬರ ಮೂಲಕ ಇವೆರಡು ಕುಟುಂಬಗಳ ನಡುವೆ ಒಂಥರಾ ಸ್ನೇಹ ಬಾಂಧವ್ಯ ಬೆಸೆದುಕೊಂಡಿತ್ತು. ದಿನಾ ಶಾಲೆಯಿಂದ ಬಂದ ಕೂಡಲೇ ಪ್ರೀತಿಯ ಬಗ್ಗೆ ಮಾತಾಡುವುದು ಫರೀನ್‌ಳ ಮೆಚ್ಚಿನ ವಿಷಯವಾಗಿತ್ತು. ಪ್ರೀತಿ ಅವಳ ಬೆಸ್ಟ್ ಫ್ರೆಂಡಂತೆ.

ಒಂದೆರಡು ತಿಂಗಳ ಹಿಂದೆ ಹೀಗೆ ಮಾತಿನ ನಡುವೆ ಫರ್ಝಾನಾ ಮಗಳನ್ನು ಕೇಳಿದ್ದಳು, “ಪ್ರೀತಿಯ ಪೂರ್ತಿ ಹೆಸರೇನು?”

“ಇರು, ಪುಸ್ತಕ ತೆಗೆದು ನೋಡ್ತೀನಿ” ಅಂತ ತನ್ನ ಬಳಿಯಿದ್ದ ಪ್ರೀತಿಯ ಒಂದು ಪುಸ್ತಕ ತಂದು ಫರೀನ್ ಅಮ್ಮನಿಗೆ ತೋರಿಸಿದಳು. ಫರ್ಝಾನಾ ಮತ್ತು ಫಾರೂಖ್ ಪರಸ್ಪರ ಮುಖ ನೋಡಿಕೊಂಡರು.

“ಓ, ಸರ್ ನೇಮ್ ದಾಶಗುಪ್ತೊ, ಅಂದರೆ ಬಂಗಾಳಿ” ಅಂದ ಫಾರೂಖ್.

ಇದಾದ ಸ್ವಲ್ಪ ದಿನಗಳಲ್ಲೇ ಫಾರೂಖ್‌ಗೆ ಅವರ ಪರಿಚಯವಾಯಿತು. ಒಂದಿನ ಶಾಲೆ ಮುಗಿಸಿ ಬರುವ ಮಕ್ಕಳನ್ನು ಕರೆದುಕೊಂಡು ಹೋಗಲು ಇಬ್ಬರೂ ತಂದೆಯರು ಕಾಯುತ್ತಾ ನಿಂತಿದ್ದರು. ಶಾಲೆಯ ಗಂಟೆ ಹೊಡೆದ ಮೇಲೆ ಫರೀನ್ ಮತ್ತು ಪ್ರೀತಿ ಇಬ್ಬರೂ ಕೈಕೈ ಹಿಡಿದುಕೊಂಡು ಮಾತನಾಡುತ್ತಾ ಈಚೆ ಬಂದರು. ಇಬ್ಬರೂ ತಮ್ಮ ಅಪ್ಪಂದಿರನ್ನು ನೋಡಿ ಖುಷಿಯಿಂದ ಓಡಿಬಂದು ಕೈಹಿಡಿದುಕೊಂಡರು. ಮಕ್ಕಳ ಕೈಹಿಡಿದ ಅಪ್ಪಂದಿರು ಒಬ್ಬರ ಮುಖವನ್ನೊಬ್ಬರು ನೋಡಿದರು.

ಫರೀನ್ ಕೈ ತೋರಿಸಿ ಅಪ್ಪನಿಗೆ ಹೇಳಿದಳು, “ಬಾಬಾ! ಅವಳು ಪ್ರೀತಿ.”